ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್‌ಜಡ್ಜ್ರೀಯವರ ಕೋರ್ಟಿನಲ್ಲಿ.

ಸ್ಯ 1884ನೇ ಇಸವಿ ಅರ್ಜೀ ನಂಬರ್ 202.

ಮೃತಪಟ್ಟ ನಂಜಮ್ಮನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು) ಮೈಸೂರು ಹಳೇ ಅಗ್ರಹಾರದಲ್ಲಿರುವ ತುಪ್ಪೆಕೆರೆ ಬಸವರಾಜಯ್ಯ, ಮೃತಪಟ್ಟ ಸದರೀ ನಂಜಮ್ಮನವರಿಗೆ ಮೊಮ್ಮಗ ಮಗನಾಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಬಸವರಾಜಯ್ಯನವರು ತುಪ್ಪೆಕೆರೆ ವಾಸಸ್ಥರಾಗಿ ಮೃತಪಟ್ಟ ನಂಜಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1360ನೇ ಇಸವಿ 27ನೇ ಅಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬಸವರಾಜಯ್ಯನವರ ಅರ್ಜೀಯನ್ನು 1884ನೇ ಇಸವೀ ಅಕ್ಟೋಬರ್ ತಿಂಗಳು ತಾರೀಖು 23ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅಕ್ಟೋಬರ್ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಕೈಸ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್ರೀಯವರ ಕೋರ್ಟಿನಲ್ಲಿ.

ಸ್ಯ 1884ನೇ ಇಸವಿ ಅರ್ಜೀ ನಂಬರ್ 300.

ಮೃತಪಟ್ಟ ರಾಮಾನುಜಾಚಾರ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಶ್ರೀನಿವಾಸಯ್ಯಂಗಾರು), ಮೃತಪಟ್ಟ ಸದರೀ ರಾಮಾನುಜಾಚಾರ್ಯನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ನಂಜನಗೂಡು ತಾಲ್ಲೂಕು ಕಳಲೆ ಕಸಬಾ ಸ್ಥಳದ ಸದರೀ ಶ್ರೀನಿವಾಸಯ್ಯಂಗಾರು) ಸದರೀ ವಾಸಸ್ಥರಾಗಿ ಮೃತಪಟ್ಟ ರಾಮಾನುಜಾಚಾರ್ಯನ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಅಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರರಾದ ಶ್ರೀನಿವಾಸಯ್ಯಂಗಾರ), ಅರ್ಜೀಯನ್ನು 1884ನೇ ಇಸವೀ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಾನುಜಾಚಾರ್ಯನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 322.

ಮೃತಪಟ್ಟ ಸೂರ್ಯನಾರಾಯಣಭಟ್ಟರ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಪುಟ್ಟಮ್ಮ, ಸುಬ್ಬಮ್ಮ, ಮೃತಪಟ್ಟ ಸದರೀ ಸೂರ್ಯನಾರಾಯಣಭಟ್ಟರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ಅತ್ತಿಕುಪ್ಪಾ ತಾಲ್ಲೂಕು ಕನ್ನಂಬಾಡಿ ಸ್ಥಳದ ಸದರೀ ಪುಟ್ಟಮ್ಮ, ಸುಬ್ಬಮ್ಮ, ಸದರೀ ವಾಸಸ್ಥನಾಗಿ ಮೃತಪಟ್ಟ ಸೂರ್ಯನಾರಾಯಣಭಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 100 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಅಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪುಟ್ಟಮ್ಮ, ಸಬ್ಬಮ್ಮನ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು [illegible]ರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೂರ್ಯನಾರಾಯಣಭಟ್ಟರ [illegible]ರಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿಧೆ.

1884ನೇ ಇಸವಿ ಅರ್ಜೀ ನಂಬರ್ 340.

ಮೃತಪಟ್ಟ ವಳಹಟ್ಟಿ ಶಿದ್ದಲಿಂಗಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಗುರುಶಿದ್ದಯ್ಯ, ಮೃತಪಟ್ಟ ಸದರೀ ಶಿದ್ದಲಿಂಗಗೌಡನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಚಾಮರಾಜನಗರ ತಾಲ್ಲೂಕು ಸರ್ವಮಾನ್ಯ ಬಾಗಳಿ ಗ್ರಾಮ ಸ್ಥಳದ ಸದರೀ ಗುರುಶಿದ್ದಯ್ಯನು, ಸದರೀ ವಾಸಸ್ಥನಾಗಿ ಮೃತಪಟ್ಟ ಸದರೀ ಶಿದ್ದಲಿಂಗ ಗೌಡನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಗುರುಶಿದ್ದಯ್ಯನ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿದ್ದಲಿಂಗಗೌಡನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 355.

ಮೃತಪಟ್ಟ ಪುಟ್ಟೇಗವ್ವಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ನಂಜಪ್ಪ ಮೈನರ್, ಗಾರ್ಡಿಯರ್ ನಂಜಪ್ಪ, ಮೃತಪಟ್ಟ ಸದರೀ ಪುಟ್ಟೇಗವ್ವಡನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಮಂಡೀ ಮೊಹಲ್ಲಾ ಸ್ಥಳದ ಸದರೀ ನಂಜಪ್ಪ ಮೈನರ್, ಗಾರ್ಡಿಯರ್ ನಂಜಪ್ಪ ನಂಜನಗೂಡು ತಾಲ್ಲೂಕು ಕಲ್ಲಹಳ್ಳೀ ವಾಸಸ್ಥನಾಗಿ ಮೃತಪಟ್ಟ ಪುಟ್ಟೇಗವ್ವಡನ ಜಿಂದಗಿ ಬಗ್ಯಾಗಿ ಬರತಕ್ಕ 800—900 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನಂಜಪ್ಪ ಮೈನರ್, ಗಾರ್ಡಿಯರ್ ನಂಜಪ್ಪನ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟೇಗವ್ವಡನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 380.

ಮೃತಪಟ್ಟ ಅವಲಕ್ಕಿ ಶೇಷಮ್ಮನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಪುರುಷೋತ್ತಮಯ್ಯ, ಪುರಭಿ ತಮ್ಮಯ್ಯ, ಮೃತಪಟ್ಟ ಸದರೀ ಶೇಷಮ್ಮನಿಗೆ ತಮ್ಮ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಕೃಷ್ಣರಾಜ ಮೊಹಲ್ಲಾ ಸ್ಥಳದ ಸದರೀ ಪುರುಷೋತ್ತಮಯ್ಯ ಪುರಭಿ ತಮ್ಮಯ್ಯ, ಸದರೀ ವಾಸಸ್ಥಳಾಗಿ ಮೃತಪಟ್ಟ ಶೇಷಮ್ಮನ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಪುರುಷೋತ್ತಮಯ್ಯ ಪುರಭಿ ತಮ್ಮಯ್ಯನ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶೇಷಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

1884ನೇ ಇಸವಿ ಅರ್ಜೀ ನಂಬರ್ 388.

ಮೃತಪಟ್ಟ ಪೆದ್ದಕುಟ್ಟಿಶಟ್ಟಿಯ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಚಿನ್ನಕುಟ್ಟಿಶಟ್ಟಿ, ಮೃತಪಟ್ಟ ಸದರೀ ಪೆದ್ದಕುಟ್ಟಿಶಟ್ಟಿಗೆ ತಮ್ಮ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಕಿಲ್ಲೇ ಸ್ಥಳದ ಸದರೀ ಚಿನ್ನಕುಟ್ಟಿಶಟ್ಟಿಯು, ಸದರೀ ವಾಸಸ್ಥನಾಗಿ ಮೃತಪಟ್ಟ ಪೆದ್ದಕುಟ್ಟಿಶಟ್ಟಿಯ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

827

ಸದರೀ ದರಖಾಸ್ತುದಾರನಾದ ಚಿನ್ನಕುಟ್ಟಿಶಟ್ಟಯ ಅರ್ಜಿಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂದ್ದಕುಟ್ಟಿಶಟ್ಟಯ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅಕ್ಟೋಬರ್ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎಸ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ತಾರೀಖು 23ನೇ ಸೆಪ್ಟಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಈ ಕೆಳಗೆ ನಮೂದಾಗುವ ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ಬೇವಾರೆಸಾಗಿ ಇರತಕ್ಕ ಈ ಮುಂದೆ ವಿವರಿಸುವ ದಸ್ತಾವೇಜುಗಳನ್ನ ಹಾಜರ್‌ಮಾಡಿದವರೇ ಆಗಲಿ ಅಥವಾ ವಾಪಸುಪಡಿಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೇ ಆಗಲಿ ಈ ನೋಟೀಸು ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ವಾಪಸ್ ತೆಗದುಕೊಳ್ಳದೇ ತಪ್ಪಿದರೆ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರೆ ಅನ್ಯಗಳನ್ನ ನಾಶಪಡಿಸಲ್ಪಡುವವು.

ಯಡತೊರೆ ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ.

ನಂಬರ್.	ದಸ್ತಾವೇಜು ಬರದು ಕೊಟ್ಟವನ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಿಸಿ ಕೊಂಡವನ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಸಾಜರಾದ ತಾರೀಖು.	ರಿಜಿಸ್ಟ್ರಿಯ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
2 1882—83	ಯಡತೊರೆ ತಾಲ್ಲೂಕು ಗಿಗೆಕೆರೆ ಗ್ರಾಮದಲ್ಲಿ ವಾಸವಾಗಿರುವ ಸ್ಮಾರ್ತ ಬ್ರಾಹ್ಮಣ ತಮ್ಮಯ್ಯನವರ ಮಗ ಹಾಲೀ ಗಂದನಹಳ್ಳಿ ಫಿರಖಾ ಶಾನುಭೋಗ ಕೆಲಸ ನೋಡುವ ನಂಜುಂಡಯ್ಯ	ಯಡತೊರೆ ತಾಲ್ಲೂಕು ಪುರದ ಹೋಬಳಿ ಹಂಪಾಪುರದ ಗ್ರಾಮದಲ್ಲಿರುವ ವೈಷ್ಣವ ಬ್ರಾಹ್ಮಣ ವೆಂಕಟಕೇಪಯ್ಯನವರ ಮಗ ರಾಮಂಣ	14—6—82	14—7—82	ಶಾನುಭೋಗತನದ ಕೆಲಸ ನೋಡುವಂತೆ ಹುಕುಂ ಆಗಿರುವದರಿಂದ ಶಾನಾಯದ ಹುಟ್ಟುವಳಿ ಪೈಕೀ 18 ರೂಪಾಯಿಗಳನ್ನ ಸಾಲಿಯಾನಾ 10 ವರುಷದ ವರಿಗೂ ಪಾವತೀ ಮಾಡುವದಾಗಿ ಕರಾರು.
ತಿರಸ್ಕರಿಸಿದ್ದು 1882	ಮೈಸೂರು ಕಿಲ್ಲೇಯಲ್ಲಿ ವಾಸವಾಗಿ ಇರುವ ಸ್ಮಾರ್ತ ಬ್ರಾಹ್ಮಣ ಅಂಬಳಿ ಸುಬ್ರಹ್ಮಣ್ಯ ಪಂಡಿತರ ಮಗ ಅಂಬಳೆ ಅಂಣಯ್ಯ ಪಂಡಿತರು	ಮೈಸೂರು ಕಿಲ್ಲೇಯಲ್ಲಿರುವ ರುಕ್ಮಿತ ಪುಟ್ಟಣಂಣಶಾಸ್ತ್ರಿಗಳ ಮಕ್ಕಳು ವೈದೀಕವೃತ್ತಿಯಿಂದ ಜೀವಿಸುವ ವೈಷ್ಣ ಶಾಸ್ತ್ರಿಗಳು	8—10—81.		1,200 ರೂಪಾಯಿನ ಭೂಸ್ಥಿತಿ ಕ್ರಯಪತ್ರ.

ಅಬ್ದುಲ್‌ಖಾದರ್, ಕೆ. ಬಿ.,
ರಿಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 28ನೇ ಸೆಪ್ಟಂಬರ್ 1884.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕಮಗಳೂರು ತಾಲ್ಲೂಕು ಮುಗಳವಳ್ಳಿ ಗ್ರಾಮದಲ್ಲಿರುವ ಮೂಲೆಮನೆ ನಂಜಪ್ಪಶಟ್ಟಿ ಮನೆಗೆ ಮಾಪೆ ಮಜಕೂರ್ ತಾರೀಖು 19ನೇ ರಾತ್ರಿ ಕನ್ನಾಹಾಕಿ ಷುಮಾರು 2,044—8—0 ಮೂಲು ಕಳವು ಮಾಡಿಕೊಂಡು ಹೋದ ಕಳ್ಳರ ದಸ್ತಗಿರಿ ಬಗ್ಗೆ ತಕ್ಕ ಬಾತ್ಮಿ ತಿಳಿಸತಕ್ಕವರಿಗೆ ಕಂಪಣಿ 100 ರೂಪಾಯಿ ಇನಾಂ ಕೊಡಲ್ಪಟ್ಟಿತ್ತು. ಕಳವು ಆದ ಜಿಂದಗೀ ತಪಸೀಲನ್ನು ಯಿದರಿಂ ನಮೂದಿಸಿಯಿದೆ:—